ಶ್ರೀ ಡಿ. ದೇವರಾಜ್ ಅರಸ್.—ವಿಲೇಜ್ ಪಂಚಾಯತ್ ಲೋಕಲ್ ಬಾಡೀಸ್ ಆಕ್ಟ್‌ನಲ್ಲಿ ಏನೇನು ಅನುಕೂಲ ತಾಲ್ಲೂಕಿಗೆ ಬೋರ್ಡಿಗೆ ಮಾಡಿಕೊಟ್ಟಿದ್ದಾರೆ, ಯಾವ ಯಾವುದರ ಮೂಲಕ ಸುಂಕ ಹಾಕಬೇಕು ಎಂದು ನಿಗದಿ ಮಾಡಿದ್ದಾರೆ ಅದರಲ್ಲಿ ಇದು ಇದ್ದರೆ ಅಭ್ಯಂತರವಿಲ್ಲ. ಇದು ಇದ್ದರೆ ಹಾಕಲಿ.

ಶ್ರೀ ಬಿ. ಬೈರಪ್ಪಾಜಿ.—ತಾಲ್ಲೂಕು ಬೋರ್ಡುಗಳಿಗೆ ಬರುವ ವರಮಾನವೂ ಕಡಿಮೆ ಯಾಗುತ್ತಿದೆ ಮತ್ತು ಈ ಬೋರ್ಡಿನಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡಲು ಕೂಡ ಕೆಲವು ಬೋರ್ಡು ಗಳಲ್ಲಿ ಹಣ ಇರುವುದಿಲ್ಲ. ಇದರ ಬಗ್ಗೆ ಸರಕಾರ ಪುನರ್ ವಿಮರ್ಶೆ ಮಾಡಿ ಅಭಿವೃದ್ಧಿ ಮಾಡಲು ಅಬಕಾರಿ ಬಾಬುಗಳಿಂದ ಹಾಗೂ ಇನ್ನಿತರ ಬಾಬುಗಳಿಂದ ಬರುವ ಹಣದ ಶೇಕಡಾ 25 ರಷ್ಟನ್ನಾದರೂ ಈ ಬೋರ್ಡುಗಳಿಗೆ ಕೊಡುವುದು ಸೂಕ್ತವಾಗಿರುತ್ತದೆ. ಇದರ ಬಗ್ಗೆ ಯೋಚಿಸಿ ತಕ್ಕ ಕಾರ್ಯಕ್ರಮ ಸರಕಾರ ತೆಗೆದುಕೊಳ್ಳುತ್ತದೆಯೇ?

ಶ್ರೀ ಡಿ. ದೇವರಾಜ ಅರಸ್.—ಈಗ ಇರುವ ಆಕ್ಟಿನಲ್ಲೇ ಭೂಕಂದಾಯದಲ್ಲಿ ಒಂದು ಭಾಗ ವನ್ನು ಕೊಡಬೇಕೆಂದು ಇದೆ. ಎಕ್ಸೈಜು ಬಾಬಿನಿಂದ ಕೊಡಬೇಕು ಎಂದು ಹೇಳುವುದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ, ತಾಲ್ಲೂಕು ಬೋರ್ಡುಗಳ ಹಣಕಾಸಿನ ಪರಿಸ್ಥಿತಿ ಅಷ್ಟು ಸಾಧುವಾಗಿಲ್ಲ ಎನ್ನುವುದು ನಮಗೂ ಕಂಡು ಬಂದಿದೆ. ಅದಕ್ಕೆ ಯಾವ ರೀತಿ ಸಹಾಯ ಮಾಡಬಹುದು ಎನ್ನುವುದನ್ನು ವಿಚಾರ ಮಾಡಬೇಕೆಂದು ಸರಕಾರ ಗಮನಿಸುತ್ತದೆ, ಆದರೆ ಮಾನ್ಯ ಸದಸ್ಯರು ಹೇಳುವ ಹಾಗೆ ಎಕ್ಸೈಜು ಬಾಬಿನಿಂದ ಕೊಡಬೇಕು ಎನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ.

## Ban on grant of land in Channarayapatna Taluk

799. Sri H. C. SRIKANTAIAH (Sravanabelagola).—

Will the Minister for Revenue be pleased to state:—

(*a*) whether it has come to the notice of the Government that the ban imposed on grant of lands in Channarayapatna taluk has not yet been lifted;

(*b*) if so, when it will be lifted?

Sri N. HUTCHAMASTHY GOWDA (Minister for Revenue).—

(*a*) There is no ban on the grant of lands in the taluk to persons eligible as per rules.

(*b*) Does not arise.

ಶ್ರೀ ಪೆಟ್. ಸಿ. ಶ್ರೀಕಂಠಯ್ಯ.—ಇಲ್ಲಿ ಉತ್ತರದಲ್ಲಿ ಭೂಮಿಯನ್ನು ಮಂಜೂರು ಮಾಡಲಿಕ್ಕೆ ನಿಷೇಧವೇನೂ ಇರುವುದಿಲ್ಲ ಎಂದು ಇದೆ. ಆದರೆ ಇಲ್ಲಿ ಮುಳುಗಡೆಯಾಗುವ ಪ್ರದೇಶದಲ್ಲಿ ಒಂದು ಎಕರೆ ಕೂಡ ಕೊಡಕೂಡದು ಎಂದು ಇಲ್ಲಿ ಹೇಳುತ್ತಿದ್ದಾರೆ ಮತ್ತು ಇದರಿಂದ ಕೆಲವೆರಿಗೆ ಭೂಮಿ ಕೂಡ ಕೊಡುತ್ತಿಲ್ಲ ಎಂದು ಮಾನ್ಯ ಮಂತ್ರಿಗಳು ಇಲ್ಲಿಗೆ ಬಂದಾಗ ಮನವಿ ಕೂಡ ಸಲ್ಲಿಸಿದ್ದರು. ಇದು ಸರಕಾರದ ಗಮನಕ್ಕೆ ಬಂದಿದೆಯೇ?

† ಶ್ರೀ ಎನ್ ಹುಚ್ಚಮಾಸ್ತಿಗೌಡ.—ಮೊದಲು 1969 ರಲ್ಲಿ ಹಾಸನ, ಆಲೂರು, ಸಕಲೇಶಪುರ ಹೊಳೆನರಸೀಪುರ ಮತ್ತು ಚನ್ನರಾಯಪಟ್ಟಣದ ಕೆಲವು ಭಾಗಗಳಲ್ಲಿ ಶೇಕಡಾ ಐವತ್ತರಷ್ಟು ಭೂಮಿ ಯನ್ನು ಹೇಮಾವತಿ ಯೋಜನೆಯಲ್ಲಿ ಮುಳುಗಡೆಯಾದ ರೈತರಿಗೆ ಕೊಡಲು ರಿಸರ್ವ್ ಮಾಡ ಬೇಕೆಂದು ಆಜ್ಞೆಯಾಯಿತು. ಇದಾದ ಮೇಲೆ 8-1-1971 ರಲ್ಲಿ 1562 ಎಕರೆ 27 ಗುಂಟೆಯಷ್ಟು ಭೂಮಿಯನ್ನು ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ರಿಸರ್ವ್ ಮಾಡಬೇಕೆಂದು ಆಜ್ಞೆಯಾಯಿತು. ಇದಾದನಂತರ 6-4-1972 ರಲ್ಲಿ 1068 ಎಕರೆ 21 ಗುಂಟೆ ಭೂಮಿಯನ್ನು ರಿಸರ್ವ್ ಮಾಡಬೇಕೆಂದೂ ಆರ್ಡರು ಆಗಿದೆ. ಉಳಿದ ಜಮೀನು ಎಂದರೆ ಚನ್ನರಾಯಪಟ್ಟಣದ ತಾಲ್ಲೂಕಿನಲ್ಲೇ

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಸುಮಾರು 41, 584 ಎಕರೆಗಳಷ್ಟು ಬರುತ್ತದೆ. ಇವೆರಡನ್ನು ಬಿಟ್ಟರೆ ಸುಮಾರು 38,952 ಎಕರೆ 38 ಗುಂಟೆಯಷ್ಟು ಭೂಮಿಯನ್ನು ಚನ್ನರಾಯಪಟ್ಟಣದ ತಾಲ್ಲೂಕಿನಲ್ಲೇ ಕೊಡುವುದಕ್ಕೆ ಅವಕಾಶವಿದೆ. ಈಗಾಗಲೇ ಈ ಭೂಮಿ ಹಂಚಬೇಕು ಎಂದು ಜಿಲ್ಲಾಧಿಕಾರಿಗಳಿಗೆ ತಿಳಿಸಿ ಆದರಂತೆ ಇಲ್ಲಿ ಜಮೀನು ಹಂಚುತ್ತಿದ್ದಾರೆ.

ಶ್ರೀ ಶರಣಪ್ಪ.—ಮುಳುಗಡೆಯಾದವರಿಗೆ ಕೊಡಲು ತಾವು ಹೇಳಿರುವ ಭೂಮಿಗಳೆಲ್ಲಾ ಒಂದೇ ಸ್ಥಳದಲ್ಲಿರುವುದೋ ಇಲ್ಲವೇ ಬೇರೆ ಬೇರೆ ಜಾಗಗಳಲ್ಲಿರುವುದೋ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದೇ ಸ್ಥಳದಲ್ಲಿದೆಯೋ ಇಲ್ಲವೋ ನಾನು ಹೇಳಲಾರೆ. ಸಾಮಾನ್ಯವಾಗಿ ಒಂದು ಸ್ಥಳದಲ್ಲಿ ಇಷ್ಟು ಭೂಮಿ ಇರುವುದು ಬಹಳ ಕಡಿಮೆ.

## Report on Kannada Language

**828.** Sri S. BANGARAPPA (Sorab).—

Will the Chief Minister be pleased to state :—

(*a*) whether a Committee was constituted by the Government to submit a report on Kannada Language ;

(*b*) if so, whether a report called " Bhasha Varadi " has been submitted to the Government and the action taken on the recommendations made in the Report ?

Sri D. DEVARAJ URS (Chief Minister).—

(*a*) Yes.

(*b*) The Committee has submitted its Report called " Antima Varadi ".

Government have generally approved of the recommendations of the Committee.

ಶ್ರೀ ಎಸ್ ಬಂಗಾರಪ್ಪ.—ಭಾಷಾ ವರದಿಯನ್ನು ಸರಕಾರಕ್ಕೆ ಯಾವಾಗ ಕಳುಹಿಸಿದರು ಮತ್ತು ಆ ವರದಿಯಲ್ಲಿರತಕ್ಕ ಮುಖ್ಯ ಅಂಶಗಳಾವುವು ? ಆ ಅಂಶಗಳನ್ನೆಲ್ಲಾ ಸರಕಾರ ಜಾರಿಗೆ ಕೊಟ್ಟಿದೆಯೇ ?

† ಶ್ರೀ ಡಿ. ದೇವರಾಜ ಅರಸ್.—ಈ ಭಾಷಾ ವರದಿ ಸರಕಾರಕ್ಕೆ 31-3-1970 ರಂದು ಬಂದಿದೆ, ಇದರಲ್ಲಿ ಕೆಲವು ಅಂಶಗಳನ್ನು ಹಂತ ಹಂತವಾಗಿ ಜಾರಿಗೆ ಕೊಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸಮಿತಿ ವರದಿ ಬಂದು ಈಗಾಗಲೇ ಒಂದು ವರ್ಷದ ಮೇಲಾಯಿತು, ಇದನ್ನು ಆದಷ್ಟು ಜಾಗ್ರತೆ ಜಾರಿಗೆ ಕೊಡುತ್ತಾರೆಯೆ? ಇವುಗಳಲ್ಲಿ ಎಷ್ಟು ಶಿಫಾರಸುಗಳನ್ನು ಕಾರ್ಯಗತ ಮಾಡಲಾಗಿದೆ. ಇವನ್ನೆಲ್ಲಾ ಕಾರ್ಯಗತ ಮಾಡದೇ ಇದ್ದರೆ ನಮ್ಮ ರಾಜ್ಯದಲ್ಲಿ ಕನ್ನಡ ರಾಜ್ಯ ಭಾಷೆಯಾಗುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇದನ್ನು ಏಕೆ ಸಾವಕಾಶ ಮಾಡುತ್ತಿದ್ದಾರೆ ಎನ್ನುವುದನ್ನು ತಿಳಿಸುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಇದರ ವರದಿ 31-3-1970ರಲ್ಲಿ ಬಂದಿದೆ, ಇದರಲ್ಲಿ ಮಾಡಿರುವ ಶಿಫಾರಸುಗಳಲ್ಲಿ ನಾನು ಮೊದಲೇ ಹೇಳಿದ ಹಾಗೆ ಹಂತ ಹಂತವಾಗಿ ಜಾರಿಗೆ ತರುವುದಕ್ಕೆ